ತುರುವೇಕೆರೆ ಟೌನಿನಲ್ಲಿ ವಾಸದ ಮನೆಗಳ ನಿರ್ಮಾಣ

(21) ಶ್ರೀ ಬೈರಪ್ಪಾಜಿ (ತುರುವೇಕೆರೆ).— ಮಾನ್ಯ ಕಾನೂನು ಸಂಸದೀಯ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಗೃಹ ನಿರ್ಮಾಣ ಮಂಡಳಿಯಿಂದ ಏಳು ವಾಸದ ಮನೆಗಳನ್ನು ತುರುವೇಕೆರೆ ಟೌನಿನಲ್ಲಿ ಕಟ್ಟುತ್ತಿರುವುದು ನಿಜವೇ ?

ಆ) ಈ ಮನೆಗಳಿಗಾಗಿ ತುರುವೇಕೆರೆ ಪೌರಸಭೆಯವರು ಉಚಿತವಾಗಿ ನಿವೇಶನಗಳನ್ನು ಕೊಟ್ಟು ಪೌರಸಭೆಯ ನೌಕರಿಗಾಗಿ ವಾಸದ ಮನೆಗಳನ್ನು ಕಟ್ಟಿಕೊಡಲು ಕೇಳಿದ್ದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ ಸಾರ್ವಜನಿಕರಿಗೆ ಮಾರಲು ಇತ್ತೀಚೆಗೆ ಟೆಂಡರ್ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಸಂಸದೀಯ ಹಾಗೂ ವಸತಿ ಮಂತ್ರಿಗಳು).—

ಅ) ಹೌದು.

ಆ) ನಿಜ.

ಇ) ಆದರೆ ಈ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಬಿ. ಬೈರಪ್ಪಾಜಿ.— ಸ್ವಾಮಿ, ಇದರಲ್ಲಿರುವ (ಅ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ ಹಾಗೆಯೇ (ಆ) ಪ್ರಶ್ನೆಗೆ ಉತ್ತರವಾಗಿ ನಿಜ ಎಂದು ಹೇಳಿದ್ದೀರಿ. ನಾನು ಕೇಳುವುದೇನೆಂದರೆ ಲಕ್ಷಾಂತರ ರೂಪಾಯಿಗಳ ಬೆಲೆಬಾಳುವ ಸೈಟನ್ನು ಕೊಡುವುದಿಲ್ಲ ಎಂದು ಹೇಳಿ ಈಗ ಅದನ್ನು ಬೇರೆಯವರಿಗೆ ಮಾರುವುದಕ್ಕೆ ಟೆಂಡರ್ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಅದಕ್ಕೂ ಸಹ ಹೌದು ಎಂದು ಹೇಳಿದ್ದೀರಿ. ಆದರೂ ಇದರ ಬಗ್ಗೆ ಯಾವ ತೀರ್ಮಾನವನ್ನೂ ಸಹ ತಾವು ತೆಗೆದುಕೊಂಡಿಲ್ಲವೆಂದು ಹೇಳಿದ್ದೀರಿ. ಇದರ ಔಚಿತ್ಯವಾದರೂ ಏನು ಎನ್ನುವುದನ್ನು ಹೇಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.— ೧೯೨೫ರಲ್ಲಿ ತುರುವೇಕೆರೆ ನಗರಸಭೆಯವರು ಆ ಜಾಗವನ್ನು ಅವರಿಗೆ ಕೊಟ್ಟಿದ್ದು ನಿಜ. ಮತ್ತು ಅವರಿಗೆ ವಾಸದ ಮನೆಗಳನ್ನು ಕಟ್ಟಿಕೊಡಲು ಹೇಳಿದ್ದುದೂ ನಿಜ. ಆದರೆ ತದನಂತರ ತುಮಕೂರು ಜಿಲ್ಲೆಯ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್‌ನವರು ಏನು ಮಾಡಿದ್ದಾರೆ ಎಂದರೆ ೧೯೮೩ನೇ ಇಸವಿಯಲ್ಲಿ ಆ ಜಮೀನನ್ನು ನಮಗೇ ಅಂದರೆ ಮುನಿಸಿಪಾಲಿಟಿಗೇ ಕೊಡುವಂತೆ ಒಂದು ಪತ್ರ ಬರೆದಿದ್ದಾರೆ.

ಎರಡನೆಯದಾಗಿ, ೧೯೮೨-೮೩ರಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಒಂದು ವ್ಯವಸ್ಥೆಯನ್ನು ಮುನಿಸಿಪಾಲಿಟಿಯವರು ಮಾಡಿಕೊಡಬೇಕಾಗಿತ್ತು. ಆಗ ಅವರು ಅದರ ಬಗ್ಗೆ ಆಸ್ತೆ ವಹಿಸಲಿಲ್ಲಾ. ಈಗ ಈ ಪ್ರಶ್ನೆ ಎದ್ದಿದೆ. ಆದರೂ ಕೂಡ ಈ ಬಗ್ಗೆ ಮುನಿಸಿಪಾಲಿಟಿಯವರನ್ನು ಕೇಳದೇ ಅದನ್ನು ವಿಲೇವಾರಿ ಮಾಡುವುದಿಲ್ಲ ಎಂದು ಹೇಳುತ್ತೇನೆ.

ಪ್ರಶ್ನೆ ೩೦೪ (೫೭) ಶ್ರೀ ಕೆ.ಎಸ್. ಕಾಳಮರಿಗೌಡ.— ಹಾಜರಿರಲಿಲ್ಲಾ.

ಶಿರಾ ನಗರದಲ್ಲಿರುವ ಕೋಟೆಯ ಅಭಿವೃದ್ಧಿ

(೭೨) ಶ್ರೀ ಪಿ. ಮೂಡ್ಲೇಗೌಡ (ಶಿರಾ).—ಮಾನ್ಯ ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರಕಾರದವರು ಐತಿಹಾಸಿಕ ಪ್ರಸಿದ್ಧವಾದ ಶಿರಾ ನಗರದ ಕೋಟೆಯ ಅಭಿವೃದ್ಧಿ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಆ) ಶಿರಾ ನಗರ ಪ್ರೇಕ್ಷಣೀಯ ಸ್ಥಳವೆಂದು ಪರಿಗಣಿಸುವ ಬಗ್ಗೆ ಸರ್ಕಾರದವರ ನಿಲುವೇನು ?

ಇ) ಪ್ರವಾಸೋದ್ಯಮ ನಿಗಮದ ವಾಹನಗಳನ್ನು ಶಿರಾದಲ್ಲಿ ನಿಂತು ಹೋಗುವ ವ್ಯವಸ್ಥೆ ಮಾಡಲಾಗುವುದೆ?

ಶ್ರೀ ಎಂ. ರಘುಪತಿ (ಮಾನ್ಯ ಪ್ರವಾಸೋದ್ಯಮ, ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—

ಎ) ಸದ್ಯಕ್ಕೆ ಯಾವ ಕ್ರಮವನ್ನು ಕೈಗೊಂಡಿಲ್ಲ.

ಆ) ಶಿರಾ ಪಟ್ಟಣ ಪ್ರವಾಸಿ ಆಕರ್ಷಣೀಯ ತಾಣವಾಗಿದ್ದು ರಾಷ್ಟ್ರೀಯ ಹೆದ್ದಾರಿಯ ಮೇಲಿದ್ದರೂ ಸಹ ಆರ್ಥಿಕ ಮುಗ್ಗಟ್ಟಿನಿಂದಾಗಿ ಸರ್ಕಾರ ಅದನ್ನು ಅಭಿವೃದ್ಧಿಪಡಿಸಲು ಸದ್ಯಕ್ಕೆ ಸಾಧ್ಯವಾಗಿಲ್ಲ.

ಇ) ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಾಹನಗಳು ಈ ಮಾರ್ಗದಲ್ಲಿ ಓಡಿಸಲು ಪ್ರಾರಂಭಿಸಿದಾಗ ಇದನ್ನು ಪರಿಗಣಿಸಲಾಗುವುದು.

ಶ್ರೀ ಪಿ. ಮೂಡ್ಲೇಗೌಡ.—ಶಿರಾ ನಗರದ ಕೋಟೆ ಐತಿಹಾಸಿಕವಾದದ್ದು ಹಾಗೂ ಇದು ಔರಂಗಜೇಬನ ಕಾಲದಲ್ಲಿ ಸ್ಥಾಪಿತವಾದಂಥದ್ದು, ಈ ಕೋಟೆಯೊಳಗೆ ಪಾಳು ಬಿದ್ದಂಥ ಅರಮನೆ ಮತ್ತು ಗಜಶಾಲೆ ಮತ್ತು ಇನ್ನೂ ಮುಂತಾದ ಕೆಲವು ಪ್ರದೇಶಗಳು ಇವೆಯೆಂದು ತಿಳಿದು ಬಂದಿದೆ. ಸರ್ಕಾರದವರು ಇದನ್ನು ದುರಸ್ತಿಮಾಡಿ ಪ್ರವಾಸಿಗರ ಕ್ಷೇತ್ರವೆಂದು ಪರಿಗಣಿಸುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಂ. ರಘುಪತಿ.—ಈ ಸದನದ ಅಧಿವೇಶನ ಮುಗಿದ ಮೇಲೆ ಆ ಪ್ರದೇಶಕ್ಕೆ ನಾನು ಭೇಟಿ ಕೊಟ್ಟು ಅವಶ್ಯಕ ಬಂದರೆ ಇದನ್ನು ಖಂಡಿತವಾಗಿಯೂ ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ. ಇದನ್ನು ಯಾವ ರೀತಿಯಲ್ಲಾದರೂ ಅಭಿವೃದ್ಧಿ ಮಾಡಬೇಕೆಂದು ಕೊಂಡಿದ್ದೇವೆ ಎನ್ನುವುದನ್ನೂ ನೋಡುತ್ತೇನೆ.

ಹುಬ್ಬಳ್ಳಿ-ಧಾರವಾಡದಲ್ಲಿ ಆಟೋರಿಕ್ಷಾ ಚಾಲಕರ ಕಿರುಕುಳ

(೭೧) ಶ್ರೀ ಹೆಗ್ಗಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಸಚಿವರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

(ಅ) ಹುಬ್ಬಳ್ಳಿ ಧಾರವಾಡ ಮಹಾನಗರಗಳಲ್ಲಿ ಆಟೋ ರಿಕ್ಷಾದವರಿಂದ ಪ್ರಯಾಣಿಕರಿಗೆ ಸುಲಿಗೆ ಆಗುತ್ತಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ?

(ಆ) ಆಟೋ ರಿಕ್ಷಾದವರು ಮೀಟರು ಹಾಕದೇ ಮನಸ್ಸಿಗೆ ಬಂದಷ್ಟು ಬಾಡಿಗೆ ವಸೂಲಿ ಮಾಡುವುದನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಸಚಿವರು).—

(ಅ) ಬಂದಿದೆ.

(ಆ) ಆಟೋ ರಿಕ್ಷಾ ಚಾಲಕರು ಹೆಚ್ಚು ದರವನ್ನು ವಸೂಲಿ ಮಾಡುವುದರ ಬಗ್ಗೆ ಮತ್ತು ಆಟೋ ರಿಕ್ಷಾಗಳಿಗೆ ದರ ಮೀಟರನ್ನು ಜೋಡಿಸುವ ಬಗ್ಗೆ ೧ನೇ ಏಪ್ರಿಲ್ ೧೯೮೩ರಿಂದ ೨೨ನೆ. ಆಗಸ್ಟ್ ೧೯೮೩ರ ವರೆಗೆ ತನಿಖೆ ನಡೆಸಲು ಈವರೆಗೆ ೯೨ ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಇದರಲ್ಲಿ ೬೨ ಚಾಲಕರಿಗೆ ಮೋಟಾರು ವಾಹನ ಅಧಿನಿಯಮ, ವಿಧಿ ೧೧೨ರ ಪ್ರಕಾರ ದಂಡವನ್ನು ವಿಧಿಸಲಾಗಿದ್ದು ಮತ್ತು ೩ ರಹದಾರಿಯನ್ನು ಮೋಟಾರು ವಾಹನ ಅಧಿನಿಯಮ ವಿಧಿ ೬೦ರ ಪ್ರಕಾರ ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ ಮತ್ತು ೨೭ ಪ್ರಕರಣಗಳಲ್ಲಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.

ಇಷ್ಟೇ ಅಲ್ಲದೆ ಸಾರ್ವಜನಿಕರಿಂದ ಹೆಚ್ಚು ಚಾರ್ಜು ವಸೂಲಿ ಮಾಡುತ್ತಿರುವುದನ್ನು ಕಂಡು ಬಂದಲ್ಲಿ ಅಂತಹ ಆಟೋ ರಿಕ್ಷಾ ಬಗ್ಗೆ ನೇರವಾಗಿ ಪ್ರಾದೇಶಿಕ ಸಾರಿಗೆ ಕಛೇರಿಗೆ ಅಗಲೀ ಅಥವಾ ಸಮೀಪದ ಪೋಲೀಸ್‌ಠಾಣೆಗೆ ಯಾಗಲೀ ತಮ್ಮ ದೂರನ್ನು ಕೊಡುವಂತೆ ದೈನಂದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ದೂರುಗಳ ಮೇಲೆ ಕಾನೂನಿನ ಪ್ರಕಾರ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಹೆಗ್ಗಪ್ಪ ಲಮಾಣಿ.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ನಗರಗಳಲ್ಲಿ ಓಡಾಡುವಂಥ ಆಟೋರಿಕ್ಷಾಗಳಿಗೆ ಒಂದಕ್ಕೂ ಮೀಟರ್ ಇರುವುದಿಲ್ಲ, ಮೀಟರ್ ಇದ್ದರೂ ಕೂಡ ಮೀಟರ್ ಪ್ರಕಾರ ಅವರು ಚಾರ್ಜನ್ನು ತೆಗೆದುಕೊಳ್ಳುವುದಿಲ್ಲ. ಸುಮಾರು ೮-೧೦ ರೂಪಾಯಿಗಳನ್ನು ಅವರು ವಸೂಲು ಮಾಡುತ್ತಿದ್ದಾರೆ. ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ, ಇದರ ಬಗ್ಗೆ